## ಕಡ್ಡಾಯ ಶಿಕ್ಷಣ ಕಾಯ್ದೆ

**1382(2119); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)**

ಅ) ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ಬಂದಿದೆಯೆ (ಕಾಯ್ದೆ ವ್ಯಾಪ್ತಿಯಲ್ಲಿ ಬರುವ ಶಾಲೆಗಳ ವಿವರಗಳನ್ನು ತಾಲ್ಲೂಕುವಾರು ಒದಗಿಸುವುದು);

ಆ) ಕಾಯ್ದೆಯಡಿ ಈ ಶಾಲೆಗಳಲ್ಲಿ ಮೀಸಲಿಟ್ಟಿರುವ ಸೀಟುಗಳ ಸಂಖ್ಯೆ ಎಷ್ಟು (ಶಾಲೆವಾರು ವಿವರ ನೀಡುವುದು);

ಇ) ಕಾಯ್ದೆ ಜಾರಿಗೆ ಬಂದಾಗಿನಿಂದ ಈವರೆಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಈ) ಕಡ್ಡಾಯ ಶಿಕ್ಷಣ ಕಾಯ್ದೆಯಡಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಕೆಲವು ಶಾಲೆಗಳಲ್ಲಿ ಪ್ರವೇಶ ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಶಾಲೆಗಳ ವಿರುದ್ಧ ಪ್ರಕರಣ ದಾಖಲಿಸಲಾಗದೆ (ವಿವರ ನೀಡುವುದು);

ಉ) ಕಾಯ್ದೆ ವ್ಯಾಪ್ತಿಯಲ್ಲಿ ವರ್ಷದಿಂದ ವರ್ಷಕ್ಕೆ ವಿಸ್ತರಿಸುತ್ತಿರುವುದು ನಿಜವೇ; ಕಾಯ್ದೆಯಲ್ಲಿ ವಿಸ್ತರಿಸಲು ಅವಕಾಶ ಇಲ್ಲದಿದ್ದರೂ ವಿಸ್ತರಿಸುವುದಕ್ಕೆ ಕಾರಣವೇನು; ಇದನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಕೈಗೊಂಡಿರುವ ಕ್ರಮಗಳೇನು?

**ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)**

ಅ) ಹೌದು.

ಕಾಯ್ದೆ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುವಾರು ಶಾಲೆಗಳ ವಿವರವನ್ನು ಲಗತ್ತಿಸಿದೆ.

ಆ) ಶಿಕ್ಷಣ ಹಕ್ಕು ಕಾಯಿದೆ ಅಡಿ 2015–16ನೇ ಸಾಲಿಗೆ 111131 ಸೀಟುಗಳನ್ನು ಅನಾನುಕೂಲ ಪರಿಸ್ಥಿತಿಯಲ್ಲಿರುವ ಮತ್ತು ದುರ್ಬಲ ವರ್ಗದ ಮಕ್ಕಳಿಗೆ ಮೀಸಲಿಡಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತವಲ್ಲದ ಅನುದಾನರಹಿತ ಶಾಲೆಗಳ ಸಂಖ್ಯೆ 11203 ಇದ್ದು, ಶಾಲಾವಾರು ಮೀಸಲಿಟ್ಟಿರುವ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್ www.schooleducation.kar.nic.in ಸಾರ್ವಜನಿಕರ ಮತ್ತು ಪೋಷಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಇ) ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಹಕ್ಕು ಕಾಯ್ದೆಯನ್ನು 2012–13ನೇ ಸಾಲಿನಿಂದ ಜಾರಿಗೆ ತರಲಾಗಿದ್ದು, 2012–13ನೇ ಸಾಲಿನಿಂದ 2015–2016ನೇ ಸಾಲಿನವರೆಗೆ ಆರ್‌ಟಿಇ ಅಡಿ ದಾಖಲಾಗಿರುವ ವಿದ್ಯಾರ್ಥಿಗಳ ಜಿಲ್ಲಾವಾರು ಮಾಹಿತಿಯ ವರ್ಷವಾರು ಪಟ್ಟಿಯನ್ನು ಲಗತ್ತಿಸಲಾಗಿದೆ.

ಈ)

| ಶಾಲೆ | ಕಾರಣ | ತೆಗೆದುಕೊಂಡಿರುವ ಕ್ರಮ |
|---|---|---|
| ಆರ್ಮಿ ಪಬ್ಲಿಕ್ ಶಾಲೆ | ರಕ್ಷಣಾ ಇಲಾಖೆಯ ಆಡಳಿತ ವ್ಯಾಪ್ತಿಗೆ ಸೇರಿರುವ ವಿಶಿಷ್ಟ ಶಾಲೆ ಎಂಬ ಕಾರಣಕ್ಕೆ | ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಮೂಲಕ ಪತ್ರ ವ್ಯವಹಾರ ಮಾಡಲಾಗಿದೆ ಸದರಿ ಶಾಲೆಗೆ ಹಂಚಿಕೆಯಾಗಿದ್ದ ಸೀಟುಗಳನ್ನು ನೆರೆಹೊರೆಯ ಇತರ ಶಾಲೆಗಳಿಗೆ ಮರು ಹಂಚಿಕೆ ಮಾಡಲಾಗಿದೆ |
| | ನ್ಯಾಯಾಲಯ ತಡೆಯಾಜ್ಞೆ ನೀಡಿರುವ ಕಾರಣ | |

ಉ) ಇಲ್ಲ.

ಕೆಲವೊಂದು ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯದ ಆದೇಶ/ ಮಧ್ಯಂತರ ತಡೆಯಾಜ್ಞೆಯಂತೆ ಕ್ರಮ ವಹಿಸಬೇಕಾದ ಹಿನ್ನೆಲೆಯಲ್ಲಿ ನೆರೆಹೊರೆಯ ಶಾಲೆಗಳ ಒಪ್ಪಿಗೆಯ ಮೇರೆಗೆ ಮತ್ತು ಅಂತಹ ಮಕ್ಕಳ

ಶೈಕ್ಷಣಿಕ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ವಹಿಸಲಾಗಿರುತ್ತದೆ. ಉಳಿದಂತೆ, ಕಾಯಿದೆ ಮತ್ತು ನಿಯಮಾವಳಿಗಳನ್ವಯ ಶೇ.25 ರ ಮೀಸಲಾತಿ ಮೀರದಂತೆ ಶಾಲೆಗಳಲ್ಲಿ ದಾಖಲಾತಿ ಒದಗಿಸಲಾಗಿರುತ್ತದೆ.

**ಮಾಡಿಗುಂಜಿ ಗ್ರಾಮದ ಶ್ರೀ ಮಾವಲಿ ದೇವಸ್ಥಾನ**

**1384(1759); ಶ್ರೀ ಅರವಿಂದ್ ಚಂದ್ರಕಾಂತ್ ಪಾಟೀಲ್ (ಖಾನಾಪುರ)**

ಅ) ಬೆಳಗಾವಿ ಜಿಲ್ಲೆ, ಖಾನಾಪುರ ತಾಲ್ಲೂಕಿನ ಮಾಡಿಗುಂಜಿ ಗ್ರಾಮದಲ್ಲಿ ಪುರಾತನ ಹಾಗೂ ಪ್ರಸಿದ್ಧವಾದ ಶ್ರೀ ಮಾವಲಿ ದೇವಸ್ಥಾನಕ್ಕೆ ಪ್ರತಿನಿತ್ಯ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬಂದು ಹೋಗುತ್ತಿರುವುದರಿಂದ ಮಾಡುವ ಪ್ರವಾಸಿ ಮಂದಿರ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು (ವಿವರ ನೀಡುವುದು);

**ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)**

ಅ) ಈ ರೀತಿಯ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ

**ಪಿ.ಯು.ಸಿ. ಉತ್ತರ ಪತ್ರಿಕೆಗಳ ಮೌಲ್ಯ ಮಾಪನದಲ್ಲಿ ಲೋಪ**

**1387(1730); ಶ್ರೀ ಅಶೋಕ ಆರ್. (ಪದ್ಮನಾಭ ನಗರ)**

ಅ) ಕಳೆದ ಮಾರ್ಚ್‌ನಲ್ಲಿ ನಡೆದ ಪಿ.ಯು.ಸಿ. ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಅಂಕವನ್ನು ನೀಡುವಲ್ಲಿ ಲೋಪವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;